ಕರ್ನಾಟಕ ಸರ್ಕಾರ

<u>ತಾಂತ್ರಿಕ ಶಿಕ್ಷಣ ಇಲಾಖೆ</u>

ಸಂಖ್ಯೆ: ಟಿಟಿಇ/02/ಇಸಿಎಸ್2/2013

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ. ಬೆಂಗಳೂರು – 1
ದಿನಾಂಕ: 29-08-2013

## <u>ಸುತ್ತೋಲೆ</u>

ವಿಷಯ: 2013 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಮರುಮೌಲ್ಯಮಾಪನದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಮತ್ತು ಪ್ರವೇಶ ಶುಲ್ಕ ಪಾವತಿಸುವ ಬಗ್ಗೆ.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2013 ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಮರುಮೌಲ್ಯಮಾಪನ ಫಲಿತಾಂಶವು ದಿನಾಂಕ:26-08-2013 ರಂದು ಪ್ರಕಟವಾಗಿದ್ದು, ಉತ್ತೀರ್ಣರಾಗಿ ಮುಂದಿನ ತರಗತಿಗಳಿಗೆ ಪ್ರವೇಶ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳ ಪ್ರವೇಶ ಮತ್ತು ಪರೀಕ್ಷಾ ಶುಲ್ಕ ಪಾವತಿ ಕುರಿತಾದ ಸ್ಪಷ್ಟೀಕರಣಕ್ಕಾಗಿ ಕೆಲವು ಸಂಸ್ಥೆಯ ಪ್ರಾಂಶುಪಾಲರು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ವಿದ್ಯಾರ್ಥಿಗಳಿಗೆ ಪ್ರವೇಶ ಹಾಗೂ ಪರೀಕ್ಷಾ ಶುಲ್ಕವನ್ನು ದಿನಾಂಕ:27-08-2013 ರಿಂದ 8 ಕಛೇರಿ ಕಾರ್ಯ ದಿನಗಳವರೆಗೆ ದಂಡ ರಹಿತವಾಗಿ ಪಾವತಿಸಲು ಸೂಚಿಸಲಾಗಿದೆ. ತದನಂತರ ಈಗಿರುವ ದಂಡಶುಲ್ಕ ನಿಯಮಾನುಸಾರ ಶುಲ್ಕ ಪಾವತಿಸಲು ತಿಳಿಸಲಾಗಿದೆ. ಸದರಿ ಮಾಹಿತಿಯನ್ನು ಎಲ್ಲಾ ವಿದ್ಯಾರ್ಥಿಗಳು/ಪೋಷಕರ ಗಮನಕ್ಕೆ ತರಲು ಸಂಬಂಧಿಸಿದ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

29/8

ಕಾರ್ಯದರ್ಶಿ

ಇವರಿಗೆ,

ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ

ಪ್ರತಿ:

1. ಇ – ಆಡಳಿತ
2. ಕಾರ್ಯದರ್ಶಿಯವರ ಆಪ್ತ ಶಾಖೆ
3. ಕಡತಕ್ಕೆ